# <u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>

## <u>ಫೌಜುದಾರಿ ಪ್ರಕರಣ ಸಂಖ್ಯೆ 76/2020</u>

ಫಿರ್ಯಾದಿಃ ಸರಕಾರದ ಪರವಾಗಿ
ಪೊಲೀಸ್ ವೃತ್ತ ನಿರೀಕ್ಷಕರು,
ಹೊನ್ನಾವರ ವೃತ್ತ, ಹೊನ್ನಾವರ.

-ವಿರುದ್ಧ-

ಆರೋಪಿಃ 1) ಸಜ್ಜಾದ ಅಹ್ಮದ ತಂದೆ ಕುತುಬುದ್ದಿನ ಗನಿ,
ವಯಸ್ಸುಃ 28 ವರ್ಷಗಳು,
ಉದ್ಯೋಗಃ ಅಡಿಕೆ ವ್ಯಾಪಾರ,

2) ಮುಬಾಶೀರ ತಂದೆ ಕುತುಬುದ್ದಿನ ಗನಿ,
ವಯಸ್ಸುಃ30 ವರ್ಷಗಳು,
ಉದ್ಯೋಗಃ ಇಲೆಕ್ಟ್ರೀಷಿಯನ್ ಕೆಲಸ,
ಸಾಕೀನಃ ತೊಹಿದಮೊಹಲ್ಲಾ, ಚಂದಾವರ,
ತಾಲೂಕುಃ ಹೊನ್ನಾವರ.

## <u>ದೋಷಾರೋಪಣೆ</u>

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1) ಮೊದಲನೆಯದಾಗಿ ಆರೋಪಿಗಳಾದ ನೀವು ದಿನಾಂಕಃ 09-03-2020 ರಂದು ಮಧ್ಯರಾತ್ರಿ 01-30ರ ಸಮಯದಲ್ಲಿ ಹೊನ್ನಾವರ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲ್ಲೂಕಿನ ನವಿಲಗೋಣ ಬಾದಳ್ಳಿರುವ ಚಾಸಾ-1 ಶ್ರೀ ರಮೇಶ ತಂದೆ ಮಹಾಬಲೇಶ್ವರ ಹೆಗೆಡೆರವರ ವಾಸದ ಆರ್ ಸಿ ಸಿ ಮನೆಯ ಹಿಂದಿನ ಕಿಟಕಿಯ ಸಜ್ಜಾದ ಮೇಲಿಂದ ಮಹಡಿಯ ಮೇಲೆ ಹತ್ತಿ ಮಹಡಿ ಮೇಲಿನ ಸಿಮೆಂಟ್ ಬಾಗಿಲನ್ನ ಹೊಡೆದು ಕಬ್ಬಿಣದ ಗ್ರೀಲ್ ಬಾಗಿಲಿಗೆ ಹಾಕಿದ್ದ ಚೀಲಕವನ್ನ ತೆರದು ಕಳ್ಳತನ ಮಾಡುವ ಉದ್ದೇಶದಿಂದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಭಾರತೀಯ ಕಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2) ಕೊನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವುಗಳು ಮನೆಯೊಳಗಡೆ ಅತಿಕ್ರಮ ಪ್ರವೇಶ ಮಾಡಿ ಮಲಗುವ ಕೋಣೆಯಲ್ಲಿ ಬೆಡ್ ಕೆಳಗೆ ಇಟ್ಟಿದ್ದ ಚಾವಿನಿಂದ ಸದರಿ ಕೋಣೆಯಲ್ಲಿದ್ದ ಕಬ್ಬಿಣದ ಗೋದ್ರೆಜ ಕಪಾಟನ್ನು ತೆರೆದು ಲಾಕರದಲ್ಲಿಟ್ಟಿದ್ದ ಒಂದು ಬಂಗಾರದ ಗಟ್ಟಿ ಉಂಗುರ, ಒಂದು ಬಂಗಾರದ ಕರಿಮಣಿ ಸರ, ಎರಡು

ಬಂಗಾರದ ಚೈನುಗಳು, ಒಂದು ಜೊತೆ ಬಂಗಾರದ ಕಿವಿ ರಿಂಗ್ ಮತ್ತು ಕಿವಿಯೋಲೆ, ಒಂದು ಬಂಗಾರದ ನಕ್ಲೇಶ್, ಒಂದು ಬಂಗಾರದ ನಾಣ್ಯ, ಒಂದು ಬಂಗಾರದ ಮುತ್ತಿನ ಸರ, ಒಂದು ಜೊತೆ ಹರಳು, ಕುಡುಕು, ಮೇಘ, ಮಾಟಿ, ಪ್ಲೇಟ, ಒಂದು ಬಂಗಾರದ ಲಾಕೆಟ್, ಒಂದು ಜೊತೆ ಬಂಗಾರದ ಕಿವಿಯೋಲೆ, ಒಂದು ಬಂಗಾರದ ದೊಡ್ಡ ಹರಳಿನ ಉಂಗುರ ಮತ್ತು ಒಂದು ಬಂಗಾರದ ಸಣ್ಣ ಹರಳಿನ ಉಂಗುರವನ್ನು ಒಟ್ಟೂ ಸೇರಿ ಸುಮಾರು 106.490 ಗ್ರಾಂ ಆಗುವಷ್ಟು ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(**ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷ್ಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆತ ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು**.)

ದಿನಾಂಕಃ 24-02-2022

ಸ್ಥಳಃ ಹೊನ್ನಾವರ.

**(ಶ್ರೀ ಕುಮಾರ ಜಿ.,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಕಂಡಾಧಿಕಾರಿಗಳು, ಹೊನ್ನಾವರ.**